ಶ್ರೀ ಭೀಮಣ್ಣ ಖಂಡ್ರೆ —ತಾವೂ ನನ್ನನ್ನು ಈ ರೀತಿಯಾಗಿ ನಿರ್ಬಂಧಿಸುವುದಾದರೆ, ನಾನು ಸೆಂಟ್ರಲ್ ಜೈಲಿನಲ್ಲಿ ಟ್ರೀಟ್ ಮೆಂಟ್ ಪಡೆಯುತ್ತಿರುತ್ತೇನೆ. ಆದ್ದರಿಂದ ನಾನು ಸಭೆಯಿಂದ ವಾಕೌಟ್ ಮಾಡಬೇಕಾಗುತ್ತದೆ.

(ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಸಭೆಯಿಂದ ನಿರ್ಗಮಿಸಿದರು)

Loss to Agricultural Crops due to heavy rains in Gulbarga District.

ಶ್ರೀ ಎನ್. ಧರ್ಮಸಿಂಗ್ (ಜೇವರ್ಗಿ).— ಗುಲ್ಬರ್ಗ ಜಿಲ್ಲೆಯಲ್ಲಿ ೧೫ನೇ ತಾರೀಖು ಮತ್ತು ೧೬ನೇ ತಾರೀಖು ಭಾರಿ ಮಳೆ ಬಂದು ರೈತರಿಗೆ ಬಹಳ ತೊಂದರೆಯಾಗಿದೆ ಇದು ಬಹಳ ಮುಖ್ಯವಾದ ವಿಷಯ ಮಾನ್ಯ ಅಧ್ಯಕ್ಷರು, ಸಮಗ್ರ ಸ್ವರೂಪ ಅವಕಾಶ ಕೊಡಬೇಕು, ಮಾನ್ಯ ಮಂತ್ರಿಗಳು ಇದಕ್ಕೆ ಪ್ರತಿಯನ್ನು ತರಿಸುವ ಅವಶ್ಯಕತೆ ಇಲ್ಲ. ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟರೆ ಸಾಕು. ಏಕೆಂದರೆ, ಅಲ್ಲಿ ಬಿತ್ತನೆ ಸೀಸನ್ ಸ್ಟಾರ್ಟ್ ಆಗಿದೆ. ರೈತರ ಬಗ್ಗೆ ತೀವ್ರವಾದ ಕಳಕಳಿಯಿಟ್ಟುಕೊಂಡಿದ್ದರೆ ಅಧಿಕಾರಿಗಳು, ಮಾನ್ಯ ಮಂತ್ರಿಗಳೂ ಇದ್ದಾರೆ, ಇವರ ಮೂಲಕ ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟರೆ ಸಾಕು.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಪ್ರತಿ ಇಪ್ಪತ್ತನೆ ದಿನದ ವಿಶೇಷವಾಗಿ ಹೇಳುತ್ತಿದ್ದಾರೆ ನೋಟೀಸ್ ಕೊಡದೆ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಇದು ಸರಿಯಲ್ಲ ಎಂದು ಮಾನ್ಯ ಸದಸ್ಯರು ನೋಟೀಸ್ ಕೊಡಬೇಕು, ಆಥವಾ ಮಾನ್ಯ ಮಂತ್ರಿಗಳ ಹತ್ತಿರ ಮಾತನಾಡಬೇಕು.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಾವು ೭ ಜನ ಸದಸ್ಯರುಗಳು ಸೇರಿ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ನಾನು ಅದನ್ನು ಪರ್ಯಾಲೋಚನೆ ಮಾಡಿ ಅಜೆಂಡಾದಲ್ಲಿ ಹಾಕಿ ಮಾಡಿಸುತ್ತೇನೆ, ಅದಕ್ಕೂ ಅವಸರ ಇದ್ದರೆ ತಾವು ಮಾನ್ಯ ಮಂತ್ರಿಗಳಲ್ಲಿ ಮಾತನಾಡಬಹುದು.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ವಿಷಯ ಬಹಳ ಮಹತ್ವವಾಗಿರುವುದರಿಂದ ..

MR. SPEAKER —How can I allow more than one Member to stand up and speak?

ಶ್ರೀ ಎನ್. ಧರ್ಮಸಿಂಗ್ —ಇದಕ್ಕೆ ಮಾನ್ಯ ಮಂತ್ರಿಗಳು ಪ್ರತಿಯನ್ನು ತರಿಸುವ ಅವಶ್ಯಕತೆ ಇಲ್ಲ ಮಾನ್ಯ ವಿರೋಧ ಪಕ್ಷದ ಮಂತ್ರಿಗಳು ಇಲ್ಲಿದ್ದಾರೆ, ರೈತರಿಗೆ ಪರಿಹಾರವನ್ನು ಕೊಡಕ್ಕೆ ವ್ಯವಸ್ಥೆಯನ್ನು ಮಾಡಿದರೆ ಸಾಕು.

(ಈ ಸಮಯದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಉತ್ತರ ಕೊಡಲು ಎದ್ದರು)

ಶ್ರೀ ಬಿ.ವಿ. ರಾಘವೇಂದ್ರ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ತಾವು ಈ ರೀತಿಯಲ್ಲಿ ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರ ಕೊಡಿಸದೆ ಅವಕಾಶ ಕೊಟ್ಟಿದ್ದೀರಿ. ಅವರು ಸಭೆಯಿಂದ ನಿರ್ಗಮಿಸುವಕ್ಕೆ ಅವಶ್ಯಕತೆ ಬರುತ್ತಿರಲಿಲ್ಲ ಈ ರೀತಿಯಾಗಿ ತಾರತಮ್ಯ ಮಾಡುವುದು ಸರಿಯಲ್ಲ

ಶ್ರೀ ಎಂ. ಚಂದ್ರಶೇಖರಪ್ಪ.—ಮಾನ್ಯ ಅಧ್ಯಕ್ಷರು ಈ ರೀತಿಯಾಗಿ ತಾರತಮ್ಯ ಮಾಡುವುದು ಸರಿಯಲ್ಲ

SRI P.A. PAWASHE —I rise to a Point of Order. The issue before the House is about the absence of Ministers and the hon. the Deputy Leader of the Opposition has requested the Chair for a Ruling. Before that issue is closed I want to know whether other members can raise other matters. I request a Ruling on this issue.

ಶ್ರೀ ಪಿ. ರಾಮದೇವ್.—ಆಸಹಾಯಕತೆಗೆ ಕಮ್ಯೂನಿಸ್ಟ್ ರೂಲಿಂಗ್ ಪಾರ್ಟಿಯವರು ತರುತ್ತಿದ್ದಾರೆ.

MR. SPEAKER —There is nothing like that. I will have to act according the Rules.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಎತ್ತಿದ ಕಿಯಾಲೊಪಕ್ಕೆ ತಾವು ಆಗಲೀ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ. ಅನಿವಾರ್ಯ ಕಾರಣಗಳಿಂದ ಮಾನ್ಯ ಮಂತ್ರಿಗಳು ಸಭೆಗೆ ಗೈರು ಹಾಜರಿ ಆದರೆ, ಅಂಥದು ಪ್ರಶ್ನೆಗಳನ್ನು ನಾಳೆ ತೆಗೆದುಕೊಳ್ಳಬಹುದು ಎಂದು ಹೇಳಲಾಗಿದೆ. ಇದಕ್ಕೆ ತಮ್ಮಿಂದ ಪ್ರತ್ಯೇಕವಾದ ರೂಲಿಂಗ್ ಕೊಡಬೇಕಾದ್ದು ಅನಾವಶ್ಯಕ ಎಂದು ನನ್ನ ಭಾವನೆ.

೧-೩೦ ಪಿ.ಎಂ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇದು ಜೀರೋ ಅವರ್ ಆಂತ ಪ್ರಾರಂಭವಾದಾಗಿನಿಂದ ಅದಕ್ಕೆ ವಿತ್ತಿಗಳವರು ಹೆಚ್ಚಿನ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತಿತ್ತು. ಆದುದರಿಂದ ಯಾರು ವಿಷಯವನ್ನು ರೈಸ್ ಮಾಡಬೇಕೆಂದಿರುತ್ತಾರೋ ಅಂಥವರು ನೋಟೀಸ್ ಕೊಟ್ಟು ಕಳುಹಿಸಿ ಕೊಟ್ಟರೆ ಅವರಿಗೆ ತೃಪ್ತಿಯಾಗುವ ಉತ್ತರವನ್ನು ದೊರಕಿಸಿ ಕೊಡಬೇಕಾದರೆ ಆ ನೋಟೀಸನ್ನು ಮಂತ್ರಿಗಳವರಿಗೆ ಕಳುಹಿಸಿ ಕೊಟ್ಟು ಉತ್ತರವನ್ನು ಇಲ್ಲಿ ಕೊಡಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಅವರು ನೋಟಿಸ್ ಕೊಟ್ಟು ರೈಸ್ ಮಾಡುವುದು ಒಳ್ಳೆಯದು. ಅವರ ಪ್ರಕರಣವು ಇಲ್ಲಿ ರೂಲ್ ನಂ. ೩೧೨ ಪ್ರೊಸಿಜರ್ನ ಫಲೋ ಮಾಡುತ್ತಿದ್ದೇವೆ ಆದರಿಂದ ತಪ್ಪು ಆ ರೀತಿ ಆಡ್ವಾನ್ಸ್ ಆಗಿ ನೋಟೀಸ್ ಕೊಟ್ಟು ಉತ್ತರ ಪಡೆಯುವುದು ಒಳ್ಳೆಯ ಸಂಪ್ರದಾಯವೆಂದು ರೂಲಿಂಗ್ ಕೊಡುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಮಾನ್ಯ ಶ್ರೀ ಲಕ್ಷ್ಮೀಸಾಗರವರು Minister absence ಬಗ್ಗೆ ಮತ್ತು Question of privilege against the Chief Minister ಬಗ್ಗೆ considered ರೂಲಿಂಗ್ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶ್ರೀ ಕೆ. ಹನುಮಂತಯ್ಯನವರು ಲೋಕಸಭಾ ಸದಸ್ಯರಾಗಿದ್ದಾಗ ವಿನಿಸ್ಟರ್ಗಳು ಗೈರು ಹಾಜರು ಆಗುವ ಬಗ್ಗೆ ಪ್ರಿವಿಲೇಜ್ ಆಫ್ ಆರ್ಡರ್ ರೈಸ್ ಮಾಡಿದಾಗ ಅಲ್ಲಿನಹ ರೂಲಿಂಗ್ ಕೊಟ್ಟಿದ್ದಾರೆ ಅದು ಸಹ ೪ ಪೇಜ್ ಇದೆ. ಅಲ್ಲಿಯ ಸ್ಪೀಕರ್ರವರು ೪ ಪೇಜ್ ಕನ್ಸಿಡರ್ಡ್ ರೂಲಿಂಗ್ ಕೊಟ್ಟಿದ್ದಾರೆ. ಆದೇ ರೀತಿ ಜೂನ್ ೭, ೧೯೭೮ರಲ್ಲಿ ಲೋಕಸಭೆಯಲ್ಲಿ ಇದರ ಬಗ್ಗೆ ರೂಲಿಂಗ್ ಕೊಟ್ಟಿರುವುದನ್ನೆಲ್ಲಾ ನಾನು ಓದಿದ ಮೇಲೆ, ಮಾನ್ಯ ಸದಸ್ಯರ ಫೀಲಿಂಗ್ಸ್ ಏನಿದೆ ಅನ್ನುವುದನ್ನು ಸರ್ಕಾರಕ್ಕೆ ತಿಳಿಸಿ ಮಾಡಿ. ಆದರು ಈ ಸಭೆಯಲ್ಲಿ ಸರಿಯಾದ ಸಮಯಕ್ಕೆ ಹಾಜರಿಗಿಲ್ಲದಂತೆ ಕೆಲಸಕಾರ್ಯಗಳು ಸಾಲಲಿತವಾಗಿ ನಡೆಯುವಹಾಗೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇನೆ ಆದೇ ರೀತಿ ಈಗ ಮಾನ್ಯ ಮಂತ್ರಿಗಳವರು ಸಹ ಸಹಕಾರ ಕೊಡುತ್ತಿದ್ದಾರೆ. ಆದ ದಂದ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳವರು ಒಪ್ಪಬಹುದೆಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಒಪ್ಪುವ ಮಾತು ಸ್ವಾಮಿ. ಅದನ್ನು ನಾವು ಒಪ್ಪುತ್ತೇವೆ.

BUDGET ESTIMATES FOR 1979-80.

DEMANDS FOR GRANTS

Demand Nos. 31 and 60 (Debate Continued)

SRI L. G. HAVANUR (Minister for Law and Social Welfare and Backward Classes) Sir, Yesterday I had moved the resolution on the demands of my two departments *viz.*, the Administration of Justice and Social Welfare. Unfortunately the moment I stand up, whether I speak on the topic relating to the Scheduled Castes/STs and Backward Classes or on the judiciary, invariably I notice some resentment from some section of the people or hon;members parti-